# ಸಾರಸಜ್ಜನರ ಸಂಗ ಲೇಸು ಕಂಡಯ್ಯಾ

◆ ಎನ್.ಜಿ. ಪ್ರಭುಪ್ರಸಾದ್

**ಮಾ**ನವನ ಜೀವನದಲ್ಲಿ ಯಶಸ್ಸು ಗಳಿಸಲು ಪೂರಕವಾದ ಅಂಶಗಳೆಂದರೆ—ಸತ್ಸಂಗ, ದೈವಭಕ್ತಿ, ಅಚಲ ನಿಷ್ಠೆ, ಪ್ರಯತ್ನಶೀಲತೆ, ಸದ್‌ಗ್ರಂಥಪಠಣ ಮೊದಲಾದವುಗಳು. ಸಜ್ಜನರ ಸಹವಾಸವಂತೂ ವ್ಯಕ್ತಿಯೊಬ್ಬನ ಜೀವನವನ್ನೇ ಸತ್ಯವೂ ಆನಂದಮಯವೂ ಆದ ಭಗವಜ್ಜೀವನದೆಡೆಗೆ ತಿರುಗಿಸಿಬಿಡುವ ಸಾಮರ್ಥ್ಯವನ್ನು ಹೊಂದಿದೆ. ಇತರರ ಏಳಿಗೆಯನ್ನು ಕಂಡು ಹರ್ಷಪಡುವ ಆ ಮಹಾತ್ಮರು ಆಧ್ಯಾತ್ಮಿಕ ಸಹಾಯ ನೀಡಿ ಸಲಹುತ್ತಾರೆ. ಆದ್ದರಿಂದಲೆ ಸರ್ವಜ್ಞಕವಿಯು "ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ" ಎಂದು ಅಭಿಮಾನಪೂರ್ವಕವಾಗಿ ಹೇಳಿದ್ದಾನೆ. ಸಂಕಷ್ಟ ಸಮುದ್ರವನ್ನು ದಾಟಿ ಶಾಂತಿಯ ದಡವನ್ನು ತಲುಪಲು ಸಜ್ಜನರು ಸುಸಜ್ಜಿತ ನಾವೆಯಂತೆ ದೊರೆಯುತ್ತಾರೆ. ಅಂತಹವರ ಸಹವಾಸ, ಮಾರ್ಗದರ್ಶನದಿಂದ ಆಧ್ಯಾತ್ಮಿಕ ಪಥದಲ್ಲಿ ಬರುವ ಅಡಚಣೆಗಳ ಬಗ್ಗೆ ನಾವು ಜಾಗರೂಕರಾಗುತ್ತೇವೆ. ಸತ್ಸಂಗದ ಮಹತ್ವವನ್ನು ಭರ್ತೃಹರಿಯು ಹೀಗೆ ವರ್ಣಿಸುತ್ತಾನೆ:

ಜಾಡ್ಯಂ ಧಿಯೋ ಹರತಿ ಸಿಂಚತಿ ವಾಚಿ ಸತ್ಯಂ
ಮಾನೋನ್ನತಿಂ ದಿಶತಿ ಪಾಪಮಪಾಕರೋತಿ ।
ಚೇತಃ ಪ್ರಸಾದಯತಿ ದಿಕ್ಷು ತನೋತಿ ಕೀರ್ತಿಮ್
ಸತ್ಸಂಗತಿಃ ಕಥಯ ಕಿಂ ನ ಕರೋತಿ ಪುಂಸಾಮ್ ॥

[ನೀತಿಶತಕ]

"ಸಜ್ಜನರ ಸಂಗವು ಬುದ್ಧಿಯ ಜಡತ್ವವನ್ನು ಹೋಗಲಾಡಿಸುತ್ತದೆ; ಮಾತಿನಲ್ಲಿ ಸತ್ಯವನ್ನು ಚಿಮುಕಿಸುತ್ತದೆ; ಗೌರವವನ್ನು ವರ್ಧಿಸುತ್ತದೆ; ಪಾಪವನ್ನು ದೂರ ಮಾಡುತ್ತದೆ; ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಎಲ್ಲೆಡೆ ಕೀರ್ತಿಯನ್ನು ತರುತ್ತದೆ. (ಹೀಗೆ) ಸತ್ಸಂಗವು ಜನರಿಗೆ ಏನು ತಾನೇ ಮಾಡಲಾರದು? ಹೇಳು."

ಮೇಲಿನ ಸುಭಾಷಿತದಲ್ಲಿ ಸಜ್ಜನರ ಸಹವಾಸವೊಂದಿದ್ದರೆ ಎಲ್ಲವನ್ನೂ ನಮ್ಮದಾಗಿಸಿಕೊಳ್ಳಬಹುದೆಂಬ ಭಾವವು ಪ್ರತಿಪಾದಿತವಾಗಿದೆ. ಸಜ್ಜನರ ಸಂಗದಿಂದ ಸಾರ್ಥಕತೆ ಹೊಂದಿದವರ ಹಲವು ಉದಾಹರಣೆಗಳು ನಮ್ಮ ಇತಿಹಾಸದಲ್ಲಿದೆ. ಸ್ವಾಮಿಭಕ್ತನಾಗಿ ನಮ್ಮೆಲ್ಲರ ಆದರ್ಶಪ್ರಾಯನಾಗಿರುವ ವೀರ ಹನುಮ, ಶ್ರೀಕೃಷ್ಣ ಪರಮಾತ್ಮನನ್ನು ಆಶ್ರಯಿಸಿ ಅವನ ಮಾರ್ಗದರ್ಶನದಲ್ಲಿ ನಡೆದ ಪಾಂಡವರು, ಬುದ್ಧನ ತೇಜಸ್ಸಿನ ಎದುರು ಶರಣಾದ ಡಕಾಯಿತ ಅಂಗುಲೀಮಾಲ, ಶಂಕರಾಚಾರ್ಯರ ಅನುಗ್ರಹದಿಂದ ಪ್ರಕಾಂಡ ಪಂಡಿತರಾದ ತ್ರೋಟಕಾಚಾರ್ಯರು, ಸ್ವತಃ ತೇಜಸ್ವಿಗಳಾಗಿದ್ದು ಶ್ರೀರಾಮಕೃಷ್ಣರ ಮಾರ್ಗದರ್ಶನದಲ್ಲಿ ಸಾಣೆ ಹಿಡಿದ ವಜ್ರದಂತೆ ಶೋಭಿಸಿದ ಸ್ವಾಮಿ ವಿವೇಕಾನಂದರು... ಹೀಗೆ ಈ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

ಸಜ್ಜನರ ಮಾತು ತುಂಬಾ ಶಕ್ತಿಯುತವಾದುದು. ಅವರ ಹಾರೈಕೆ, ಮಾರ್ಗದರ್ಶನ ಹಾಗೂ ಋಜುತ್ವದ ಮಾತುಗಳಿಂದ ಸ್ಫೂರ್ತಿ ಹೊಂದಿ ಅಸಾಧ್ಯವೆನಿಸುವ ಕೆಲವು ಮಹತ್ಕಾರ್ಯಗಳೇ ಸಾಧಿಸಲ್ಪಡುತ್ತವೆ.

ಸತ್ಪುರುಷರ ಒಡನಾಟ ಸುಕೃತದಿಂದ ಲಭಿಸುವಂತಹುದು. ಒಮ್ಮೆ ಅವರ ಸ್ನೇಹ ಲಭಿಸಿದರೆ ಅದು ಶಿಥಿಲವಾಗುವುದಿಲ್ಲ. ಅವರ ಸಲಹೆ, ಪ್ರೀತಿಗಳು ನಮಗೆ ನಿರಂತರವಾಗಿ ಲಭಿಸುತ್ತಿರುತ್ತವೆ. ನಡುವೆ ಸಣ್ಣ ಮನಸ್ತಾಪಗಳು ಬಂದರೂ, ಅವುಗಳನ್ನು ಅಳಿಸಿ ಸ್ನೇಹವನ್ನು ಮುಂದುವರೆಸುತ್ತಾ ತಮ್ಮ ಔದಾರ್ಯವನ್ನು ಮೆರೆಯುತ್ತಾರೆ. ಆಂಗ್ಲಭಾಷೆಯಲ್ಲಿ ಸಜ್ಜನ ಸ್ನೇಹಿತರ ಬಗ್ಗೆ ಅರ್ಥಪೂರ್ಣವಾದ ಉಕ್ತಿಯೊಂದಿದೆ: Good friends are those who know everything about you and still like you"— "ನಿಮ್ಮ ಬಗ್ಗೆ ಎಲ್ಲವನ್ನೂ ತಿಳಿದೂ ನಿಮ್ಮನ್ನು ಪ್ರೀತಿಸುವವರೇ ನಿಜವಾದ ಗೆಳೆಯರು."

ಸಜ್ಜನರ ಸ್ನೇಹ ಕಡಮೆಯಾಗುವುದಿಲ್ಲವೆಂಬ ನೀತಿಶತಕದ ಸುಭಾಷಿತವೊಂದು ಇಲ್ಲಿದೆ:

ಆರಂಭಗುರ್ವೀ ಕ್ಷಯಿಣೀ ಕ್ರಮೇಣ
ಲಘ್ವೀ ಪುರಾ ವೃದ್ಧಿಮತೀ ಚ ಪಶ್ಚಾತ್ ।
ದಿನಸ್ಯ ಪೂರ್ವಾರ್ಧ ಪರಾರ್ಧ ಭಿನ್ನಾ
ಛಾಯೇವ ಮೈತ್ರೀ ಖಲು ಸಜ್ಜನಾನಾಮ್ ॥

ದುರ್ಜನರ ಮೈತ್ರಿ ಹಗಲಿನ ಮೊದಲ ಭಾಗದಲ್ಲಿ ಕಾಣುವ ಪದಾರ್ಥದ ನೆರಳಿನಂತೆ, ಪ್ರಾರಂಭದಲ್ಲಿ ದೊಡ್ಡದಾಗಿಯೂ, ಕ್ರಮೇಣ ಚಿಕ್ಕದಾಗಿಯೂ ಇರುತ್ತದೆ. ಆದರೆ ಸತ್ಪುರುಷರ



ಇಂಜನಿಯರಿಂಗ್ ಪದವಿ ವ್ಯಾಸಂಗ ಮಾಡುತ್ತಿರುವ ಲೇಖಕರು ಶೃಂಗೇರಿಯವರು. ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ಆಲೋಚಿಸಿ ಲೇಖನದ ರೂಪದಲ್ಲಿ ಇಳಿಸಿ ಪ್ರಕಟಿಸುವುದು ಇವರ ಮೆಚ್ಚಬೇಕಾದ ಹವ್ಯಾಸ. ಪ್ರಸ್ತುತ ಲೇಖನದಲ್ಲಿ ಸತ್ಸಂಗವನ್ನು ಸಮರ್ಪಕ ಉದಾಹರಣೆಗಳೊಂದಿಗೆ ವಿಶ್ಲೇಷಿಸಿದ್ದಾರೆ.

ಸ್ನೇಹವಾದರೋ, ಮಧ್ಯಾಹ್ನದಲ್ಲಿ ಕಾಣುವ ಪದಾರ್ಥದ ನೆರಳಿನಂತೆ. ಪ್ರಾರಂಭದಲ್ಲಿ ಸಣ್ಣದಾಗಿದ್ದರೂ ಕ್ರಮೇಣ ಬೆಳೆಯುತ್ತಲೇ ಇರುತ್ತವೆ. ಸಜ್ಜನರ ಸ್ನೇಹವು ಕಾಲಕ್ರಮೇಣ ವೃದ್ಧಿಸುತ್ತದೆಯೇ ಹೊರತು ಕ್ಷಯಿಸುವುದಿಲ್ಲ ಎಂದು ಕವಿ ಒಂದು ಸುಂದರ ಉಪಮೆಯಿಂದ ವರ್ಣಿಸಿದ್ದಾನೆ. ಅಕಸ್ಮಾತ್, ಆ ಸ್ನೇಹಕ್ಕೆ ಧಕ್ಕೆ ಒದಗಿದರೂ ಅದರ ನಿವಾರಣೆ ಸುಲಭಸಾಧ್ಯವೆಂದು ಈ ಕೆಳಗಿನ ಸದುಕ್ತಿಯಲ್ಲಿ ಧ್ವನಿತವಾಗಿದೆ:

**ಮೃದ್ಘಟ ಇವ ಸುಖಭೇದ್ಯೋ ದುಃಸಂಧಾನಶ್ಚ**
**ದುರ್ಜನೋ ಭವತಿ ।**
**ಸುಜನಸ್ತು ಕನಕಘಟ ಇವ ದುರ್ಭೇದ್ಯಶ್ಚಾಶು ಸಂಧೇಯಃ ॥**
— *ತ್ರಿಶತೀ ವ್ಯಾಖ್ಯಾ, ನೀತಿ ೩೩*

ದುಷ್ಟನು ಮಣ್ಣಿನ ಗಡಿಗೆಯಿದ್ದಂತೆ. ಅವನನ್ನು ಭೇದಿಸುವುದು ಸುಲಭ. ಒಮ್ಮೆ ಮುರಿದರೆ ಮತ್ತೆ ಬೆಸುಗೆಯೂ ಅಸಾಧ್ಯ. ಸಜ್ಜನರು ಚಿನ್ನದ ಕಲಶವಿದ್ದಂತೆ. ಭೇದಿಸುವುದು ಕಷ್ಟ. ಒಂದು ವೇಳೆ ಭೇದಿಸಲು ಸಾಧ್ಯವಾದರೆ ಸ್ನೇಹದ ಬೆಸುಗೆಯೂ ಸುಲಭಸಾಧ್ಯವಾಗಿರುತ್ತದೆ.

ಸತ್ಪುರುಷರ ಸ್ನೇಹ ಗಳಿಸಲು ಸಮಾನಮನಸ್ಕತೆಯೊಂದೇ ಇರಬೇಕಾದ ಅರ್ಹತೆ. ನಾವೂ ಸಹ ಅವರಂತೆಯೇ ಸರಳತೆ, ಸತ್ಯಸಂಧತೆ, ಸಹಿಷ್ಣುತೆಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಅವರಿಗೆ ವಂಚನೆ ಮಾಡದೆ, ನೇರ ನಡೆನುಡಿಗಳನ್ನು ಯಾವಾಗಲೂ ಹೊಂದಿರಬೇಕು. "ಸಾಧು ಸಜ್ಜನರನ್ನು ಮೋಸಗೊಳಿಸುವುದು ಸುಲಭ. ಆದರೆ ಅದರ ಪರಿಣಾಮ ಮಾತ್ರ ಘೋರತರವಾದುದು" ಎಂಬ ಉಕ್ತಿಯನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಬೇಕು. ಅದರ ಕಾರಣಕರ್ತನ ವಿನಾಶಕ್ಕೆ ಅವರು ಮನನೊಂದರೆ ಸಾಕು, ಅವರೇನೂ ಶಪಿಸಬೇಕಾಗಿಲ್ಲ. ಮಹಾನುಭಾವರು ಯಾರಲ್ಲಿಯೂ ಭೇದ ತೋರದೆ ಎಲ್ಲರನ್ನೂ ತಮ್ಮಂತೆಯೇ ಪರಿಗಣಿಸುತ್ತಾರೆ. ಹೇಗೆಂದರೆ:

**ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ।**
**ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥**
— *ಈಶಾವಾಸ್ಯ ಉಪನಿಷತ್, ೬*

"ಯಾರು ಎಲ್ಲಾ ಜೀವಿಗಳನ್ನೂ ಆತ್ಮನಲ್ಲಿ ನೋಡುವರೋ ಮತ್ತು ಎಲ್ಲಾ ಜೀವಿಗಳಲ್ಲಿಯೂ ಆತ್ಮನನ್ನು ಕಾಣುವರೋ ಅವರು ಯಾವುದನ್ನೂ ತಾತ್ಸಾರದಿಂದ ನೋಡುವುದಿಲ್ಲ." ಎಲ್ಲ ಜೀವಿಗಳಲ್ಲೂ ಆತ್ಮನ ಅಭಿವ್ಯಕ್ತಿಯನ್ನು ಯಾರು ನೋಡಲು ಶಕ್ತರಾಗಿರುತ್ತಾರೊ, ಅವರಿಗೆ ಎಲ್ಲಾ ಜೀವರಾಶಿಗಳೂ ಪರಮಾತ್ಮನಲ್ಲಿಯೇ ನೆಲೆಸಿರುವಂತೆ ಕಾಣುತ್ತದೆ. ಹೀಗೆ ಅನುಭಾವಿಗಳಾದ ಸತ್ಪುರುಷರು ಯಾರಲ್ಲಿಯೂ ಭೇದಭಾವವನ್ನೆಣಿಸುವುದಿಲ್ಲ. ಶ್ರೀರಾಮಕೃಷ್ಣ ಪರಮಹಂಸರು ಒಮ್ಮೆ ದೇವಿಗೆ ನೈವೇದ್ಯವನ್ನು ಅರ್ಪಿಸುತ್ತಿರುವಾಗ ಬೆಕ್ಕೊಂದು ಬಂದು ಅದನ್ನು ತಿನ್ನತೊಡಗಿತು. ಅವರು ಆ ಬೆಕ್ಕನ್ನು ಗದರಿಸದೆ, "ತಾಯಿ, ನೀನು ಈ ರೂಪದಿಂದ ನಾನು ಅರ್ಪಿಸಿದ ನೈವೇದ್ಯವನ್ನು ಸ್ವೀಕರಿಸಲು ಇಚ್ಛಿಸಿದ್ದೀಯಾ?" ಎಂದು ಹೇಳುತ್ತ ಅದರಲ್ಲೂ ದೈವಸ್ವರೂಪವನ್ನು ಕಂಡರು.

ಸ್ವತಃ ಅನೇಕ ಕಷ್ಟಗಳನ್ನೆದುರಿಸಿದರೂ ಸಹ ಸತ್ಪುರುಷರು ಪರೋಪಕಾರಿ ಕೃತ್ಯಗಳನ್ನು ಮಾಡದೇ ಬಿಡುವುದಿಲ್ಲ. ಫಲ ಕೊಡುವ ಮರಕ್ಕೆ ತಾನೆ ಜನರು ಕಲ್ಲನ್ನೆಸೆಯುವುದು? ಜೇನ್ನೊಣಗಳು ಕಷ್ಟಪಟ್ಟು ಸಂಗ್ರಹಿಸುವ ಮಧುವನ್ನು ಅವುಗಳಿಗೂ ಉಳಿಸದೆ ಸೂರೆ ಮಾಡುತ್ತಾರೆ. ಹೀಗೆ ಸಜ್ಜನರಿಗೆ ತೊಂದರೆಗಳು ತಪ್ಪಿದ್ದಲ್ಲ. ಆದರೆ ಇವೆಲ್ಲವನ್ನೂ ದೈವೇಚ್ಛೆಯೆಂದು ಭಾವಿಸಿ ಅವರು ಇಟ್ಟ ಹೆಜ್ಜೆಯನ್ನು ಹಿಂದೆಗೆಯದೆ ಕಾರ್ಯತತ್ಪರರಾಗುತ್ತಾರೆ. ಅಲ್ಲದೆ ಸತ್ಪುರುಷರು ವಿಪತ್ತಿನಲ್ಲಿದ್ದಾಗಲೇ ಹಿಂದೆಂದೂ ಕಾಣದ ಉದಾತ್ತ ಗುಣವನ್ನು ಪ್ರಕಟಿಸುತ್ತಾರೆ. ಧೂಪವು ಬೆಂಕಿಯ ನಡುವೆ ಇದ್ದಾಗಲೇ ಲೋಕೋತ್ತರವಾದ ಪರಿಮಳವನ್ನು ಹರಡುತ್ತದೆ. ಇದಕ್ಕೆ ಸಾಕ್ಷಿಯಾಗಿ ಶ್ರೀ ನಾರಾಯಣಗುರು, ಬಸವೇಶ್ವರರು, ದಿವ್ಯತ್ರಯರು, ಸಂತ ಕಬೀರ್ ಮೊದಲಾದವರು ಆಚಂದ್ರಾರ್ಕವಾಗಿ ಶೋಭಿಸುತ್ತಾರೆ. ಅವರು ತಮ್ಮ ತತ್ತ್ವಗಳನ್ನು ತಮ್ಮ ಸಹವರ್ತಿಗಳಿಗೆ ಬೋಧಿಸುವುದರೊಂದಿಗೆ ಸಮಾಜ ಸುಧಾರಣೆಗೆ ತಮ್ಮದೇ ಆದ ಕಾಣಿಕೆ ನೀಡಿ ಮನುಕುಲಕ್ಕೆ ಮಹೋಪಕಾರಗೈದಿದ್ದಾರೆ. ಅವರ ಅನುಭವದ ಒಂದೊಂದು ಸದುಕ್ತಿಗಳೂ ಜ್ಞಾನದ ಕಿಡಿಗಳಿದ್ದಂತೆ. ಅವುಗಳ ಆಚರಣೆಯಿಂದ ಶುಭವಾಗಿ ನಾವು ಶುಭ್ರರಾಗುವುದರಲ್ಲಿ ಸಂದೇಹವಿಲ್ಲ!

ಕವಿಗಳು ಸತ್ಪುರುಷರ ಹೃದಯವನ್ನು ಬೆಣ್ಣೆಯೆಂದು ವರ್ಣಿಸಿದ್ದಾರೆ. ಇದು ಸುಳ್ಳು. ಬೇರೆಯವರ ಕಷ್ಟವನ್ನು ಕಂಡು ಸಜ್ಜನರು ಕರಗುತ್ತಾರೆ. ಆದರೆ ಬೆಣ್ಣೆಯು ಹಾಗೆ ಕರಗುವುದಿಲ್ಲ ಎಂದು ಸುಭಾಷಿತಕಾರರೊಬ್ಬರು ಸಜ್ಜನರ ಕರುಣೆಯನ್ನು ಹೊಗಳಿದ್ದಾರೆ. ಆಪತ್ತಿಗೆ ತುತ್ತಾದವರ ಸಹಾಯಕ್ಕಾಗಿ ಸತ್ಪುರುಷರು ಸರ್ವದಾ ಸನ್ನದ್ಧರಾಗಿರುತ್ತಾರೆ. ಕಷ್ಟದಲ್ಲಿರುವವರು ಬಾಯಿಬಿಟ್ಟು ಕೇಳದಿದ್ದರೂ ತಾವಾಗಿಯೇ ಅವರಿಗೆ ನೆರವಾಗುತ್ತಾರೆ. ಶ್ರೀಕೃಷ್ಣನ ಸ್ನೇಹಿತನಾಗಿದ್ದ ಸುದಾಮನು ತುಂಬಾ ಬಡವನಾಗಿದ್ದ. ಅವನ ಪತ್ನಿಯ ಸಲಹೆಯ ಮೇರೆಗೆ ಶ್ರೀಕೃಷ್ಣನ ಬಳಿ ಸಂಪತ್ತು ಕೇಳಲು ಅರಮನೆಗೆ ಒಂದು ಹಿಡಿಯಷ್ಟು ಅವಲಕ್ಕಿಯೊಡನೆ ಹೋದ. ಅಲ್ಲಿ ದೇವಕೀಸುತನ ಆತಿಥ್ಯಕ್ಕೆ ಮಾರುಹೋದ ಕುಚೇಲ ಏನನ್ನೂ ಕೇಳಲಿಲ್ಲ. ಈತನೂ ಏನನ್ನೂ ನೀಡಲಿಲ್ಲ. ಆದರೆ ಸುದಾಮ ಮನೆಗೆ ಹಿಂತಿರುಗಿದಾಗ ತನ್ನ ಕಣ್ಣುಗಳನ್ನೇ ತಾನು ನಂಬಲಾಗಲಿಲ್ಲ. ಗುಡಿಸಲಾಗಿದ್ದ

ಅವನ ಮನೆ ಅರಮನೆಯಂತೆಯೂ, ಸರಿಯಾದ ಬಟ್ಟೆ ಬರೆಗಳಿಲ್ಲದ ಹೆಂಡತಿ ಮಕ್ಕಳು ವಾಸುದೇವನ ಕೃಪೆಯಿಂದ ಪೀತಾಂಬರ ಧರಿಸಿ ಓಡಾಡುವಂತೆಯೂ ಆಗಿತ್ತು. ಆ ಭಕ್ತ ವತ್ಸಲನು ತನ್ನ ಪ್ರಿಯಮಿತ್ರನಿಗೆ ಅವನು ಇಚ್ಛಿಸಿದ್ದೆಲ್ಲವನ್ನೂ ಅವನಾಗಿಯೇ ಕೇಳದಿದ್ದರೂ ದಯಪಾಲಿಸಿದ್ದನು. ಸತ್ಪುರುಷರ ಅನುಗ್ರಹವೊಂದಿದ್ದರೆ ಎಲ್ಲವೂ ಲಭಿಸುತ್ತದೆ ಎನ್ನಲು ಇದೊಂದು ನಿದರ್ಶನ.

**ಸಂಸಾರೇಽಸ್ಮಿನ್ ಕ್ಷಣಾರ್ಧೋಽಪಿ ಸತ್ಸಂಗಃ ಶೇವಧಿರ್ನೃಣಾಮ್**—ಈ ಸಂಸಾರದಲ್ಲಿ ಸತ್ಪುರುಷರ ಸಂಗವು ಒಂದು ಅರ್ಧ ಕ್ಷಣವಿದ್ದರೂ ಕೂಡ ಅದು ಮಾನವರಿಗೆ ಒಂದು ನಿಧಿಯಿದ್ದಂತೆ ಎಂದು ಭಾಗವತದಲ್ಲಿ ಸತ್ಸಹವಾಸದ ಪ್ರಾಮುಖ್ಯತೆಯನ್ನು ಹೇಳಲಾಗಿದೆ. ಸತ್ಪುರುಷರ ದರ್ಶನ ಪುಣ್ಯಕರ. ಅವರು ತೀರ್ಥಕ್ಷೇತ್ರವಿದ್ದಂತೆ. ತೀರ್ಥಕ್ಷೇತ್ರ ದರ್ಶನ ವಾದರೋ ಕಾಲಾಂತರದಲ್ಲಿ ಫಲ ಕೊಡುತ್ತದೆ. ಆದರೆ ಸಾಧು ಸಮಾಗಮವು ಕೂಡಲೇ ಒಳ್ಳೆಯ ಫಲವನ್ನು ನೀಡುತ್ತದೆ. ಅವರ ಉಪಸ್ಥಿತಿಯೇ ಅಲೌಕಿಕ ಶಾಂತಿಯನ್ನು ನೀಡುತ್ತದೆ. ಸಜ್ಜನರೊಡನೆ ಸಂವಾದ ನಡೆಸುವುದರಿಂದ ಅವರ ಅನುಭವದ ಮಾತುಗಳನ್ನು ನಮ್ಮದಾಗಿಸಿಕೊಳ್ಳಬಹುದು. ಅವರ ನಿರ್ಮಲ ವಾದ ಮನಃಶಕ್ತಿಯ ಪ್ರಭಾವದಿಂದ ಕ್ರೂರಿಗಳೂ ಸಹ ಸಾಧು ಗಳಾಗಿ ಪರಿವರ್ತಿತರಾಗುತ್ತಾರೆ. ರತ್ನಾಕರನೆಂಬ ಬೇಡನೊಬ್ಬನು ಕಾಡಿನಲ್ಲಿ ದಾರಿಹೋಕರನ್ನು ದೋಚಿ ಜೀವಿಸುತ್ತಿದ್ದನು. ಒಮ್ಮೆ ಅನೇಕ ಋಷಿಗಳನ್ನು ಅಡ್ಡ ಹಾಕಿ ಬೆದರಿಕೆಯೊಡ್ಡಿದನು. ಆದರೆ ಅನಂತರ ಅವರ ಸಾತ್ವಿಕವಾದ ನುಡಿಗಳಿಂದ ಪ್ರೇರಿತನಾಗಿ ತಪೋನಿರತನಾದನು. ಮುಂದೆ ರಾಮಾಯಣದ ಕರ್ತೃವಾಗಿ ಆದಿಕವಿ ಎಂದು ಪ್ರಸಿದ್ಧನಾಗಿ ಜಗದ್ವಂದ್ಯನಾದನು.

ಹಣ, ಆಸ್ತಿ, ಲೌಕಿಕ ಪ್ರಪಂಚದಲ್ಲಿ ಗೌರವಯುತ ಸ್ಥಾನಮಾನ ಇವುಗಳನ್ನು ಪರಿಶ್ರಮದಿಂದ ಸಂಪಾದಿಸಬಹುದು. ಆದರೆ ಇವುಗಳಾವುವೂ ಶಾಶ್ವತವಲ್ಲ. ಆದ್ದರಿಂದ ಶಾಶ್ವತವಾದ ಆನಂದವನ್ನು ಕಂಡುಹಿಡಿಯಲು ಪ್ರಯತ್ನ ಪಡಬೇಕು. ಇದಕ್ಕೆ ದೃಢ ನಿಶ್ಚಯ, ಸತತ ಪರಿಶ್ರಮಗಳು ಅತ್ಯಗತ್ಯ. ಇದೆಲ್ಲಕ್ಕಿಂತ ಮಿಗಿಲಾಗಿ ಸದ್ಗುರುಗಳ ಮಾರ್ಗದರ್ಶನ, ಆಶೀರ್ವಾದಗಳು ಬೇಕು. ಆ ಮಹಾತ್ಮರು ಸಾಧಕನ ಸದ್ಯದ ಪ್ರಗತಿಯನ್ನು ವಿಮರ್ಶಿಸಿ ಅವನಿಗೆ ಸೂಕ್ತವಾದ ದಾರಿ ತೋರಿಸುತ್ತಾರೆ. ಅವರು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅಸಂಖ್ಯ ಸಾಧಕರ ಮೇಲೆ ಪ್ರಭಾವ ಬೀರುತ್ತಾರೆ. ಅವರ ಬೋಧನೆಗಳು ಸಾರ್ವ ಕಾಲಿಕ ಸತ್ಯಗಳಾಗಿದ್ದು ಅವುಗಳು ಮುಮುಕ್ಷುಗಳ ಪಾಲಿಗೆ ದಾರಿದೀಪಗಳಾಗಿರುತ್ತವೆ. ಕರ್ಮಭೂಮಿಯಾದ ನಮ್ಮ ಭರತಖಂಡದಲ್ಲಿ ಅಂತಹ ಅನೇಕ ಪುಣ್ಯಾತ್ಮರು ವಿವಿಧ ಕಾಲ ಘಟ್ಟಗಳಲ್ಲಿ ಅವತರಿಸಿ ಅಜ್ಞಾನವೆಂಬ ತಮಸ್ಸಿನ ಕೂಪದಲ್ಲಿ ತೊಳಲಾಡುವ ಜನರನ್ನು ಮೇಲೆತ್ತಿ ಉದ್ಧರಿಸಿದ್ದಾರೆ. ಶ್ರೀಮಾತೆ, ಶ್ರೀರಾಮಕೃಷ್ಣರು, ಜಗದ್ಗುರು ಆದಿಶಂಕರರು ಮೊದಲಾದವರು ಇಂದಿಗೂ ಸಹ ಅಸಂಖ್ಯ ಭಕ್ತರ ಆರಾಧ್ಯದೈವವಾಗಿದ್ದಾರೆ. ಸ್ವಾಮಿ ವಿವೇಕಾನಂದರಂತೂ ಭಾರತದ ಕೀರ್ತಿಪತಾಕೆಯು ಪಾಶ್ಚಾತ್ಯ ದೇಶಗಳಲ್ಲಿಯೂ ಹಾರಾಡುವಂತೆ ಮಾಡಿದ ಭಾರತ ಮಾತೆಯ ಹೆಮ್ಮೆಯ ಪುತ್ರರಾಗಿದ್ದಾರೆ. ಇಂತಹ ಸತ್ಪುರುಷರ ನಾಡಿನಲ್ಲಿ ಜನಿಸಿದ ನಾವೇ ಧನ್ಯರು!

ಸತ್ಪುರುಷರ ಸಹವಾಸವು ದೊರಕದಿದ್ದಾಗ ಏನು ಮಾಡು ವುದು ಎಂಬ ಪ್ರಶ್ನೆ ಮೂಡಬಹುದು. ಸದ್ಗ್ರಂಥಗಳನ್ನು ಓದುವುದರಿಂದಲೂ ನಾವು ಸಜ್ಜನರ ಸಹವಾಸದ ಪರಿಣಾಮ ವನ್ನೇ ಹೊಂದಬಹುದು. ಉತ್ತಮ ಪುಸ್ತಕಗಳಾದರೋ, ಅನುಭಾವಿ ಚಿಂತಕರ ಲೇಖನಿಯಿಂದ ವಿಚಾರ ಪರಿಪ್ಲುತವಾಗಿ ಹೊರಹೊಮ್ಮಿರುತ್ತವೆ. ಅವು ಸಾಮಾನ್ಯನೊಬ್ಬನನ್ನು ಅಸಾಮಾನ್ಯವಾಗಿ ಪರಿವರ್ತಿಸುವ ಸ್ಪರ್ಶಮಣಿಗಳಾಗಿರುತ್ತವೆ. ಪ್ರಪಂಚದ ವಿವಿಧ ಭಾಗಗಳ ಅನುಭಾವಿಗಳ ವಿಚಾರದ ಹೊನಲನ್ನು ಪುಸ್ತಕಗಳನ್ನೋದುವುದರ ಮೂಲಕ ನಮ್ಮದಾಗಿಸಿ ಕೊಳ್ಳಬಹುದು. ಮಹಾತ್ಮಾ ಗಾಂಧಿ ಮೊದಲಾದವರ ಜೀವನ ಚರಿತ್ರೆಗಳನ್ನು ಅವಲೋಕಿಸಿದಾಗ ಅವರ ಮೇಲೆ ಸದ್ಗ್ರಂಥಗಳು ಪ್ರಭಾವ ಬೀರಿದ್ದುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಸರ್ವಶ್ರೇಷ್ಠನಾದ ಪರಮಾತ್ಮನ ಮೊರೆಹೋಗುವುದಕ್ಕಿಂತ ಮಿಗಿಲಾದ ಸತ್ಸಂಗ ಬೇರೊಂದಿಲ್ಲ. ನಮಗೆ ಸತ್ಸಂಗ ಆವಶ್ಯಕ ವೆನಿಸಿದಾಗಲೆಲ್ಲ ಭಗವಂತನನ್ನು ಚಿಂತಿಸಿ ಅವನ ಮಂತ್ರವನ್ನು ಉಚ್ಚರಿಸಬೇಕು. ನಾವು ಅವನ ದಾಸರಾದಾಗ ಅವನು ನಮ್ಮಲ್ಲಿ ವಾಸವಾಗುತ್ತಾನೆ. ಸರ್ವಶಕ್ತನಾದ ಅವನು ನೈಜ ಭಕ್ತಿಗೆ ಏನನ್ನೂ ಕರುಣಿಸಬಲ್ಲನು. ನಿಸ್ಪೃಹ ಭಕ್ತಿಗೆ ತನ್ನನ್ನೇ ಭಕ್ತರಿಗೆ ನೀಡುತ್ತಾನೆ. ಶ್ವೇತಾಶ್ವತರ ಉಪನಿಷತ್ತಿನ ಈ ಮಂತ್ರವು ಅವನ ಹಿರಿಮೆಯನ್ನು ವರ್ಣಿಸುತ್ತದೆ:

ಸ ವೃಕ್ಷಕಾಲಾಕೃತಿಭಿಃ ಪರೋಽನ್ಯೋ
ಯಸ್ಮಾತ್ ಪ್ರಪಂಚಃ ಪರಿವರ್ತತೇಯಮ್ ।
ಧರ್ಮಾವಹಂ ಪಾಪನುದಂ ಭಗೇಶಂ
ಜ್ಞಾತ್ವಾಽತ್ಮಸ್ಥಮಮೃತಂ ವಿಶ್ವಧಾಮ ॥ (ಶ್ವೇತಾಶ್ವತರ. ೬)

"ಯಾವ ಪರಮೇಶ್ವರನಿಂದ ಈ ಪ್ರಪಂಚ ಸುತ್ತುತ್ತಿರು ವುದೋ ಅವನು ಸಂಸಾರ ಮತ್ತು ಕಾಲಗಳಿಂದ ವಿಲಕ್ಷಣ ನಾಗಿರುವನು ಮತ್ತು ಶ್ರೇಷ್ಠನಾದ ಅವನೇ ಧರ್ಮಸ್ಥಾಪಕನೂ, ಪಾಪನಾಶಕನೂ ಹಾಗೂ ಸರ್ವ ಐಶ್ವರ್ಯ ಸಂಪನ್ನನೂ ಆಗಿದ್ದಾನೆ. ಅವನು ಬುದ್ಧಿಯ ಗುಹೆಯಲ್ಲಿ ನೆಲೆಸಿರುವನು. ಅಲ್ಲದೇ ಅವನು ಅಮೃತ, ವಿಶ್ವಾಧಾರ. ಅವನನ್ನು ಸಾಕ್ಷಾತ್ಕಾರ

ಮಾಡಿಕೊಂಡವನು ಅವನನ್ನೇ ಸೇರುತ್ತಾನೆ." ಈ ಅರ್ಥ ಗರ್ಭಿತವಾದ ಮಂತ್ರದಲ್ಲಿ ಸರ್ವತಂತ್ರ ಸ್ವತಂತ್ರನಾದ ಪರಮಾತ್ಮನ ಅಪಾರ ಶಕ್ತಿಯ ಬಗ್ಗೆ ಹೇಳಲಾಗಿದೆ. ಇಂತಹ ಸರ್ವಶಕ್ತನನ್ನು ಕುರಿತಾಗಿ ಸದಾ ಧ್ಯಾನ ಮಾಡಿ ಅವನನ್ನು ಒಲಿಸಿಕೊಂಡವನು ಅವನಂತೆಯೇ ಆಗುತ್ತಾನೆ. ಭಗವನ್ನಾಮ ಸ್ಮರಣೆಯೊಂದೇ ನಮ್ಮ ಸಮಸ್ತ ಪಾಪಗಳನ್ನು ತೊಳೆದು ಹಾಕಬಲ್ಲದು. ಅವನ ಒಂದೊಂದು ನಾಮವೂ ತೇಜಃ ಪುಂಜವಾಗಿದೆ; ಶಕ್ತಿಯನ್ನು ದಯಪಾಲಿಸಬಲ್ಲದ್ದಾಗಿದೆ. ಹೀಗೆ ಭಗವಂತನ ಸಾನ್ನಿಧ್ಯಕ್ಕಿಂತ ಮಿಗಿಲಾದ ಸತ್ಸಹವಾಸವಿಲ್ಲ.

ಕೊನೆಯದಾಗಿ, ಸತ್ಪುರುಷರ ಸ್ನೇಹದಿಂದ ಎಲ್ಲವನ್ನೂ ಪಡೆದುಕೊಳ್ಳಬಹುದಾದರೂ ಎಲ್ಲಕ್ಕಿಂತಲೂ ಮಿಗಿಲಾದ ಆಧ್ಯಾತ್ಮಿಕ ವಿಚಾರವನ್ನೇ ಅವರಿಂದ ಬಯಸುವುದು ಬುದ್ಧಿವಂತನ ಲಕ್ಷಣ. ನಮ್ಮ ಜೀವನದ ಹಾದಿಗೆ ಬೆಳದಿಂಗಳಿನಂತಿರುವ ಅವರ ಸ್ನೇಹವನ್ನು ಹೊಂದೋಣ. ಹಾಗೆ ಹೊಂದಿದ ಸ್ನೇಹವನ್ನು ಜೀವನಪರ್ಯಂತ ಉಳಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಆನಂದಮಯ ಜೀವನವನ್ನು ನಡೆಸಿ ಪರಮಾತ್ಮನೆಡೆಗೆ ಸಾಗೋಣ. ಈ ನಿಟ್ಟಿನಲ್ಲಿ ಆ ಮಹಾಶಕ್ತಿಯು ನಮ್ಮೆಲ್ಲರನ್ನೂ ಪ್ರೇರಿಸಲಿ. *

ಭವದ್ವಿಧಾ ಭಾಗವತಾಃ ತೀರ್ಥಭೂತಾಃ ಸ್ವಯಂ ವಿಭೋ ।
ತೀರ್ಥೀಕುರ್ವಂತಿ ತೀರ್ಥಾನಿ ಸ್ವಾಂತಸ್ಥೇನ ಗದಾಭೃತಾ ॥

'ಸಾಧುಗಳು ಶುದ್ಧೀಕರಣದಲ್ಲಿ ಅತಿ ಶ್ರೇಷ್ಠರು. ಪವಿತ್ರ ಜಲ ಮುಂತಾದುವುಗಳಿಂದ ಆತ್ಮಶುದ್ಧಿಗೆ ಬಹಳ ಸಮಯ ಹಿಡಿಯುವುದು. ಆದರೆ ಸಾಧುಸಂಗವು ಕ್ಷಣಮಾತ್ರದಲ್ಲಿ ಅಪವಿತ್ರತೆಯನ್ನು ಹೋಗಲಾಡಿಸುವುದು. ಈ ತೀರ್ಥ ಪುರುಷರು ತೀರ್ಥಸ್ಥಳವನ್ನು ತೀರ್ಥೀಕರಿಸುವರು. ಏಕೆಂದರೆ ಅವರು ಅಲ್ಲಿಗೆ ಹೋದಾಗ ಹೃದಯದಲ್ಲಿ ಭಗವಂತನನ್ನು ಕರೆದುಕೊಂಡು ಹೋಗುವರು.'

– ಭಾಗವತ( [illegible] )

## ಜಗತ್ತೇ ನನ್ನದು

ಲಾವೋತ್ಸೆ ಚೀನಾ ದೇಶದ ಸುಪ್ರಸಿದ್ಧ ತತ್ತ್ವಜ್ಞಾನಿ. ಅವನ ಉಪದೇಶದಿಂದ ಅಲ್ಲಿನ ಪ್ರಜೆಗಳು ತುಂಬಾ ಪ್ರಭಾವಿತರಾಗಿದ್ದರು. ಅವನ ಕೀರ್ತಿ ನಾಡಿನಲ್ಲೆಲ್ಲಾ ಹರಡಿತ್ತು. ಇದನ್ನು ಕೇಳಿದ್ದ ಆ ದೇಶದ ರಾಜನಿಗೆ ಲಾವೋತ್ಸೆಯನ್ನು ನೋಡಬೇಕೆಂಬ ಬಯಕೆಯುಂಟಾಯಿತು. ತನ್ನ ಸಕಲ ಪರಿವಾರದೊಂದಿಗೆ ಅವನಿರುವಲ್ಲಿಗೆ ಹುಡುಕಿಕೊಂಡು ಹೊರಟ. ಲಾವೋತ್ಸೆ ಒಂದು ಮರದ ಕೆಳಗೆ ಕುಳಿತಿದ್ದ. ಲೋಕಪ್ರಸಿದ್ಧನಾದ ತನ್ನ ದೇಶದ ತತ್ತ್ವಜ್ಞಾನಿ ಮರದ ಕೆಳಗೆ ಭಿಕ್ಷುಕನಂತೆ ಕುಳಿತಿರುವುದು ರಾಜನಿಗೆ ಅಹಿತವೆನಿಸಿತು. ಆಗ ರಾಜನು ಲಾವೋತ್ಸೆಯನ್ನು ಕುರಿತು, "ನಿನ್ನನ್ನು ಶ್ರೇಷ್ಠ ತತ್ತ್ವಜ್ಞಾನಿಯೆಂದು ನನ್ನ ಪ್ರಜೆಗಳು ಹೊಗಳುತ್ತಾರೆ. ನನ್ನ ದೇಶದ ಇಂಥ ಜ್ಞಾನಿ ಭಿಕ್ಷುಕನಂತಿರುವುದು ನನಗೆ ಹಿತವೆನಿಸುವುದಿಲ್ಲ. ನಿನ್ನ ಬಗ್ಗೆ ಕನಿಕರವೆನಿಸುತ್ತದೆ. ನಿನಗೇನು ಬೇಕು ಕೇಳು. ನೀನು ಕೇಳಿದ್ದನ್ನೆಲ್ಲಾ ಕೊಡುವೆನು. ಅದರಿಂದ ನಿನ್ನ ಬಡತನ ನೀಗಿ ಸುಖವಾಗಿರಬಹುದು" ಎಂದನು. ರಾಜನ ಮಾತುಗಳನ್ನು ಕೇಳಿದ ಲಾವೋತ್ಸೆ ನಸುನಕ್ಕನು. ಇದರಿಂದ ಆಶ್ಚರ್ಯಚಕಿತನಾದ ರಾಜನು "ಏಕೆ ನಗುತ್ತಿರುವೆ?" ಎಂದು ಕೇಳಿದನು. ಆ ಮಾತಿಗೆ ಲಾವೋತ್ಸೆ "ನಿನ್ನ ಬಡತನ ಕಂಡು ನನಗೆ ನಗು ಬಂತು. ಅದಕ್ಕಾಗಿ ನಕ್ಕೆ" ಎಂದನು. ಆಗ ರಾಜನು, "ಏನು? ನನಗೆ ಬಡತನವೆ? ಇಡೀ ಚೀನಾ ದೇಶವೇ ನನ್ನದು. ಈ ಸಾಮ್ರಾಜ್ಯದ ಸಕಲ ಸಂಪತ್ತು ನನ್ನದು. ಅರಮನೆಯಲ್ಲಿ ನಗನಾಣ್ಯಗಳು, ಒಡವೆ ವಸ್ತ್ರಗಳು, ವಜ್ರ ವೈಢೂರ್ಯಗಳು ತುಂಬಿ ತುಳುಕಾಡುತ್ತಿವೆ. ನನ್ನ ಕಣ್ಸನ್ನೆಯಿಂದಲೇ ನನಗೆ ಬೇಕಾದ್ದನ್ನೆಲ್ಲಾ ಪಡೆದುಕೊಳ್ಳಬಲ್ಲೆ. ಹೀಗಿರುವಾಗ ನನಗೆ ಬಡತನ ಎನ್ನುವೆಯಲ್ಲಾ?" ಎಂದನು. ಆಗ ಲಾವೋತ್ಸೆ ಮೌನವೇ ಮಾತಾಡಿದಂತೆ ಹೀಗೆಂದನು, "ರಾಜನ್, ನಿನ್ನ ರಾಜ್ಯಕ್ಕೆ ಎಲ್ಲೆಯುಂಟು, ಗಡಿಯುಂಟು. ನಿನ್ನ ಸಾಮ್ರಾಜ್ಯವನ್ನು ನಾಳೆ ಶತ್ರು ರಾಜರುಗಳು ಅಪಹರಿಸಬಹುದು. ನಿನ್ನ ಸಿಂಹಾಸನ ಅನ್ಯರ ಪಾಲಾಗಬಹುದು. ನಿನ್ನ ಐಶ್ವರ್ಯವನ್ನೆಲ್ಲಾ ಅವರು ದೋಚಬಹುದು. ಆಗ ನೀನು ಎಲ್ಲವನ್ನೂ ಕಳೆದುಕೊಂಡ ಭಿಕಾರಿಯಂತಾಗಬಹುದು. ಆದರೆ ನನಗಾದರೋ, ಈ ಜಗತ್ತೇ ನನಗೆ ಸೇರಿದ್ದು. ಈ ಜಗತ್ತಿನಲ್ಲಿರುವುದೆಲ್ಲವೂ ನನ್ನದೇ. ನನ್ನ ಸಾಮ್ರಾಜ್ಯಕ್ಕೆ ಎಲ್ಲೆ ಇಲ್ಲ. ನನ್ನ ಸಾಮ್ರಾಜ್ಯವನ್ನು ಯಾರೂ ಅಪಹರಿಸಲಾರರು. ನನ್ನ ಹೃದಯಸಾಮ್ರಾಜ್ಯದಲ್ಲಿ ಅರೆಕೊರೆಗಳಿಲ್ಲ, ಬಡತನದ ಬೇಗೆಯಿಲ್ಲ. ಅದು ಆನಂದದ ಆಗರ, ಬತ್ತದ ಸಾಗರ" ಎಂದನು. ಆಗ ರಾಜನಿಗೆ ತನ್ನ ಅಜ್ಞಾನದ ಅರಿವಾಯಿತು. ಲಾವೋತ್ಸೆಯ ಅಡಿಗಳಿಗೆ ಮುಡಿಯಿಟ್ಟು ತನಗೆ ದೀಕ್ಷೆಯಿತ್ತು ಉದ್ಧರಿಸಬೇಕೆಂದು ಬೇಡಿಕೊಂಡನು.

(ಸಂಗ್ರಹ: –ಡಿ.ಕೆ. ಈರೇಗೌಡ, ಮೈಸೂರು)